**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 167/2021**

**ಫ್ರಾಸಾ- 6 ಚಾಸಾ- 4**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮೋಹನ್ ಕುಮಾರ್ |
| ತಂದೆಯ ಹೆಸರುಃ | : | ಶಿವಲಿಂಗ |
| ವಯಸ್ಸುಃ | : | 46 ವರ್ಷ |
| ಉದ್ಯೋಗಃ | : | ಕೂಲಿ |
| ವಾಸ | : | ಮಾದನಹಳ್ಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:15-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1 ರಿಂದ 3 ಮತ್ತು 5 ರವರ ಪರಿಚಯವಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿಲ್ಲ. 2024ನೇ ಸಾಲಿನಲ್ಲಿ ಮಡಬಲು ಗ್ರಾ.ಪಂ.ಗೆ ನಾನು ಹೋಗಿಲ್ಲ. ಆರೋಪಿತರು ಅಲ್ಲಿ ಚಾಸಾ-1 ರಿಂದ 3 ರವರ ಜೊತೆ ಜಗಳವಾಡಿದ್ದನ್ನು ನಾನು ನೋಡಿಲ್ಲ. ಚಾಸಾ-1ರವರಿಗೆ ಆರೋಪಿ ಮಚ್ಚಿನಿಂದ ಹಲ್ಲೆ ಮಾಡಿದ್ದನ್ನು ಮತ್ತು ಕಛೇರಿಯ ಕಂಪ್ಯೂಟರ್ ಒಡೆದು ಹಾಕಿ ನಷ್ಟಉಂಟುಮಾಡಿದ ವಿಚಾರ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 4ನ್ನು ನಾನು ಈ ಹಿಂದೆ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿನಾಂಕ 1-9-2020ರಂದು ಮಧ್ಯಾಹ್ನ 4-30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-5ರವರು ಮಡಬಲು ಗ್ರಾ.ಪಂ. ಕಛೇರಿಗೆ ಕೆಲಸದ ನಿಮಿತ್ತ ಹೋಗಿದ್ದೆವು ಎಂದರೆ ಸರಿಯಲ್ಲ. ಅಲ್ಲಿ ಚಾಸಾ-1 ರಿಂದ 3ರವರು ಕಂಪ್ಯೂಟರ್ ಕೊಠಡಿಯಲ್ಲಿ ಕರ್ತವ್ಯ ನಿಆವಹಿಸುತ್ತಿದ್ದಾಗ ಆರೋಪಿಯು ಎಂ.ಒ.1ರ ಮಚ್ಚು ಹಿಡಿದುಕೊಂಡು ಅಲ್ಲಿಗೆ ಬಂದರು ಎಂದರೆ ಸರಿಯಲ್ಲ. ಅವರು ಚಾಸಾ-1ರವರನ್ನುದ್ದೇಶಿಸಿ ಏನೋ ಪಿಡಿಒ, ನನಗೆ ಮೆಣಸು ಬೆಳೆಯಲು ಸಹಾಯಧನ ಕೊಡಲಿಲ್ಲ, ಬೋಳಿ ಮಗನೆ ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಮಚ್ಚನ್ನು ಬೀಸಿ ಕೊಲೆ ಮಾಡುತ್ತೇನೆಂದು ಕೊಲ್ಲಲು ಪ್ರಯತ್ನಪಟ್ಟಾಗ ಮಚ್ಚು ಭುಜದ ಎಡಬದಿಗೆ ತಗುಲಿ ರಕ್ತಗಾಯವಾಯಿತು ಎಂದರೆ ಸರಿಯಲ್ಲ. ಆರೋಪಿಯು ಕಛೇರಿಯಲ್ಲಿ ಅಳವಡಿಸಿದ್ದ 2 ಸಿಪಿಯು, 2 ಮಾನೀಟರ್, ಒಂದು ಪ್ರಿಂಟರ್ ಒಂದು ಬಯೋಮೆಟ್ರಿಕ್ ನ್ನು ಕೆಳಗೆ ಬೀಳಿಸಿ ಜಖಂಗೊಳಿಸಿದರು ಎಂದರೆ ಸರಿಯಲ್ಲ. ಇದರಿಂದಾಗ ಸುಮಾರು 75000ರೂ ನಷ್ಟ ಉಂಟಾಯಿತು ಎಂದರೆ ಸರಿಯಲ್ಲ.ನಾನು ಚಾಸಾ-2, 3 ಮತ್ತು 5ರವರು ಸೇರಿ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಆಗ ಆರೋಪಿ ಮಚ್ಚು ಸಮೇತ ಓಡಿಹೋದರು ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ಚಾಸಾ-1ರವರನ್ನು ಆಲೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಈ ರೀತಿ ನಾನು ಈಗ ನನಗೆ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ನಾನು ಘಟನೆಯನ್ನು ಕಣ್ಣಾರೆ ಕಂಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**